# ಆಕರ್ಷಕ ತೀರ್ಥದ ಗಿಂಡಿ!

ಧಾರವಾಡ ಜಿಲ್ಲೆಯ ಬೂದನ ಗುಡ್ಡದ ಬಸವೇಶ್ವರ ದೇವಾಲಯಕ್ಕೆ ನಿತ್ಯ ನೂರಾರು ಭಕ್ತರು ಆಗಮಿಸುತ್ತಾರೆ. ದೇವರ ದರ್ಶನ ಪಡೆದ ಮೇಲೆ ಅವರಿಗೆ ತೀರ್ಥ ನೀಡುವುದು ಸಂಪ್ರದಾಯ. ಈ ಚಿತ್ರದಲ್ಲಿರುವ ಗಿಂಡಿಯಿಂದಲೇ ತೀರ್ಥ ನೀಡುವುದು. ಬಸವಣ್ಣನ ಮುಖವಿರುವ ಈ ತೀರ್ಥದ ಗಿಂಡಿಯು ಆಕರ್ಷಕವಾಗಿದ್ದು, ಬಸವಣ್ಣನ ಮುಖದಲ್ಲಿ ಕೊಂಬು, ಕಿವಿ, ಕಣ್ಣುಗಳು, ಕೊರಳಪಟ್ಟಿ ಗೋಚರಿಸುತ್ತವೆ. ಮೇಲೊಂದು ಹಿಡಿಕೆಯೂ ಇದೆ.

**–ಪ್ರಕಾಶ ಎಸ್. ಮನ್ನಂಗಿ, ಹಾವೇರಿ**





# ಸಿದ್ದಿಗಳ ಚರ್ಮವಾದ್ಯ ‘ಡಮಾಮಿ ಡೋಲು’

ಪಶ್ಚಿಮ ಘಟ್ಟದ ಪ್ರದೇಶದಲ್ಲಿ ನೆಲಸಿರುವ ಸಿದ್ದಿ ಸಮುದಾಯದವರು ಹಬ್ಬ–ಹುಣ್ಣಿಮೆಗಳಲ್ಲಿ ಡಮಾಮಿ ನೃತ್ಯ ಪ್ರದರ್ಶಿಸುವರು. ಅಂತಹ ನೃತ್ಯಗಳ ಹಿನ್ನಲೆಯಲ್ಲಿ ಹಾಡುಗಳ ಲಯಕ್ಕೆ ತಕ್ಕ ಹಾಗೆ ‘ಡಮಾಮಿ’ ಎನ್ನುವ ಚರ್ಮ ವಾದ್ಯ ಬಾರಿಸುವರು. ಡೋಲಿನಾಕೃತಿಯ ಈ ವಾದ್ಯ ಪರಿಕರವನ್ನು ಹೆಚ್ಚಾಗಿ ಹಿರಿಯರೇ ಬಾರಿಸುವುದು ವಾಡಿಕೆ.

**ಚಿತ್ರ-ಬರಹ:ದತ್ತಾತ್ರೇಯ ಭಟ್ಟ, ಕಣ್ಣಿಪಾಲ**

# ಕರ್ನಾಟಕದ ಆಹಾರ ಉತ್ಪನ್ನಗಳು

ಇತ್ತೀಚೆಗಷ್ಟೇ ದಾವಣಗೆರೆಯಲ್ಲಿ ನಡೆದ ಕೃಷಿ ಮೇಳದಲ್ಲಿ ಈ ವಿಶಿಷ್ಟ ಆಹಾರ ಧಾನ್ಯಗಳ ಕರ್ನಾಟಕ ನಕ್ಷೆ ಮಾಡಲಾಗಿತ್ತು. 30 ಜಿಲ್ಲೆಗಳ ಜಿಲ್ಲಾ ಗಡಿ ನಿರ್ಮಿಸಿ ಅದರಲ್ಲಿ ಆ ಜಿಲ್ಲೆಯಲ್ಲಿ ಬೆಳೆಯಲಾಗುವ ಆಹಾರ ಧಾನ್ಯ ಹಾಗೂ ಅದರ ಉತ್ಪನ್ನಗಳನ್ನು ಇಡಲಾಗಿತ್ತು. ಉತ್ತರದ ಬೀದರ್‌ನಿಂದ ದಕ್ಷಿಣದ ಚಾಮರಾಜನಗರದವರೆಗಿನ ಬೆಳೆಗಳನ್ನು ಪ್ರದರ್ಶಿಸಲಾಗಿತ್ತು. ಉದಾ: ಬೆಳಗಾವಿಗೆ ಕಬ್ಬು, ತುಮಕೂರಿಗೆ ರಾಗಿ, ಚಿತ್ರದುರ್ಗಕ್ಕೆ ಶೇಂಗಾ... ಹೀಗೆ ಇಡಲಾಗಿತ್ತು.

**–ಡಾ. ಕೆ.ವಿ. ಸಂತೋಷ್ ಹೊಳಲ್ಕೆರೆ, ಚಿತ್ರದುರ್ಗ**

